## ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಪಾಂಡವಪುರ

**ಸಿಸಿ.ನಂ. 258/2024**

| | | | |
|---|---|---|---|
| **ಸಾಕ್ಷಿದಾರರು** | : | **ಸ್ವಾಮಿ** | **ಸಿ.ಡಬ್ಲ್ಯೂ : 7** |
| **ತಂದೆ ಹೆಸರು** | : | **ಗೋಪಾಲ** | **ಪಿ.ಡಬ್ಲ್ಯೂ : 6** |
| **ವಯಸ್ಸು** | : | **42 ವರ್ಷ** | |
| **ವೃತ್ತಿ** | : | **ಗಾರೆ ಕೆಲಸ** | |
| **ವಾಸ ಸ್ಥಳ** | : | **ಜಯಂತಿ ನಗರ, ಕೆನ್ನಾಲು ಗ್ರಾಮ.** | |

**ಸಾಕ್ಷಿಯನ್ನು ದಿಃ 03.06.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

1. ಈಗ ತೋರಿಸಿದ ನಿಪಿ.7 ಪಂಚನಾಮೆ ಮತ್ತು ನಿಪಿ.8 ನೊಟೀಸಿನಲ್ಲಿ ಸಾಕ್ಷಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ.7 ಬಿ ಮತ್ತು ನಿಪಿ.8 ಬಿ ಎಂದು ಗುರ್ತಿಸಲಾಯಿತು. ದಿಃ 27.07.2024 ರಂದು ನಾನು ನನ್ನ ಸ್ನೇಹಿತ ಬೈಕಿನಲ್ಲಿ ಎಸ್ ಎಲ್ ವಿ ಚತ್ರದ ಬಳಿ ಹೋಗುತ್ತಿರುವಾಗ ಪೊಲೀಸರು ನಮ್ಮನ್ನು ನಿಲ್ಲಿಸಿ ಕರೆದರು. ರಾಜೇಶ ಮತ್ತು ರವಿಕುಮಾರ್ ರವರ ನಡುವೆ ದಿಃ 21.07.2024 ರಂದು ಗಲಾಟೆಯಾಗಿತ್ತು, ಆ ವಿಚಾರವಾಗಿ ಸ್ಥಳ ಪಂಚನಾಮೆ ಮಾಡಲು ಸಹಕರಿಸಿ ಎಂದು ಕೇಳಿಕೊಂಡರು. ನಾವುಗಳು ಒಪ್ಪಿ ಸಹಕರಿಸಿವು. ನಮ್ಮಗಳನ್ನು ನಿಲ್ಲಿಸಿ ಪೊಲೀಸರು ಪೋಟೋ ತೆಗೆದರು. ಚಾಸಾ.1, 8, ನಾನು ಪೊಲೀಸರು

ಇದ್ದೆವು. 1.45 ರಿಂದ 2.30 ಗಂಟೆ ವರೆಗೆ ಮಹಜರು ಮಾಡಿದರು. ನಿಪಿ.9 ರಲ್ಲಿ ತಾನಿರುವುದಾಗಿ ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

2. ಚಾಸಾ.1 ಮತ್ತು ನೀವು ಒಂದೇ ಊರಿನವರು ಹಾಗೂ ಸ್ನೇಹಿತರು ಎಂದರೆ ಸರಿ. ನಾನು ಗಾರೆ ಕೆಲಸ ಮಾಡುತ್ತೇನೆ. ದಿಃ 27.07.2024 ರಂದು ಪಿ ಎಸ್ ಎಸ್ ಕೆ ಕಟ್ಟಡದ ಪಕ್ಕ ಕ್ಲಬ್ ನ ಹಿಂದುಗಡೆ ಒಂದು ಬಿಲ್ಡಿಂಗ್ ಕೆಲಸ ಮಾಡುತ್ತಿದ್ದೆನು. ನಾನು ಮೇಸ್ತ್ರಿ ಕೆಲಸ ಮಾಡಿಸುತ್ತೇನೆ. ಆ ದಿನ ಮೂರು ಕಡೆ ಕಟ್ಟಡದ ಕೆಲಸ ಮಾಡಿಸುತ್ತಿದ್ದೆನು. ಆ ದಿನ ನಾನು ಮತ್ತು ನನ್ನ ಸ್ನೇಹಿತ ವೈನ್ ಸ್ಟೋರಿಗೆ ಬೈಕಿನಲ್ಲಿ ಹೋಗುತ್ತಿದ್ದೆವು. ನಿಪಿ.7 ರ ಸಂಗತಿಗಳು ನಿಮಗೆ ಖುದ್ದು ಗೊತ್ತಿಲ್ಲ ಎಂದರೆ ಸರಿ. ಸಾಕ್ಷಿ ಜ್ಞಾಪಕ ಇಲ್ಲವೆಂದು ಹೇಳುತ್ತಾರೆ. ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ಚಾಸಾ.1, 8, ನೀವುಗಳು ಪರಸ್ಪರ ಸ್ನೇಹಿತರಾಗಿರುವುದರಿಂದ ಷಾಮೀಲಾಗಿ ಪ್ರಕರಣಕ್ಕಾಗಿ ನಿಪಿ.7 ರಿಂದ 9 ನ್ನು ದಾಖಲೆಗಳನ್ನು ಸೃಷ್ಟಿಸಿರುತ್ತೀರಾ ಎಂದರೆ ಸರಿಯಲ್ಲ. ನಿಮಗೂ ಆರೋಪಿಗೂ ವೈಷಮ್ಯ ಇದೆ ಎಂದರೆ ಸರಿಯಲ್ಲ. ನಿಮಗೂ ಮತ್ತು ಆರೋಪಿಗೂ ವೈಷಮ್ಯ ಇರುವುದರಿಂದ ಅವರ ವಿರುದ್ಧ ಸುಳ್ಳು ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ).**

**ಸಾ.ಓ.ಹೇ.ಕೆ.ಸ.ಇ.**

*ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು*
*ಜೆ.ಎಂ.ಎಫ್.ಸಿ., ಪಾಂಡವಪುರ.*